ಅಪರ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚನ್ನಪಟ್ಟಣ

ಪ್ರಕರಣ ಸಂಖ್ಯೆ: ಸಿ.ಸಿ./110/2021

ದಿನಾಂಕ: 01.02.2025

(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಡಿಡಬ್ಲ್ಯೂ: 1 (ಆರೋಪಿ)

| | | |
|---|---|---|
| ಹೆಸರು | : | ರೇಣುಕ |
| ಗಂಡನ ಹೆಸರು | : | ನಾಗರಾಜು |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ದೊಡ್ಡ ಮಳೂರು, ಚನ್ನಪಟ್ಟಣ |

ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ.ಜೆ.ಪಿ. ವಕೀಲರಿಂದ:

1. ಪಿರ್ಯಾದುದಾರರು ನನಗೆ ಪರಿಚಯಯಸ್ಥರು. ಅವರು ಫೈನಾನ್ಸ್ ವ್ಯವಹಾರ ನಡೆಸುತ್ತಾರೆ. ನಾನು 2017 ನೇ ಇಸವಿಯಲ್ಲಿ ಪಿರ್ಯಾದುದಾರರಿಂದ 1 ಲಕ್ಷರೂ ಫೈನಾನ್ಸ್ ನಲ್ಲಿ ಸಾಲವಾಗಿ ಬಟ್ಟೆ ಅಂಗಡಿಯ ವ್ಯಾಪಾರಕ್ಕಾಗಿ ಪಡೆದುಕೊಂಡಿದ್ದೆ. ಆ ಸಂದರ್ಭದಲ್ಲಿ ಪಿರ್ಯಾದುದಾರರಿಗೆ ಕೆನರಾ ಬ್ಯಾಂಕ್ ಖಾತೆಗೆ ಸೇರಿದ ಸಹಿ ಮಾಡಿದ ಮೂರು ಖಾಲಿ ಚೆಕ್ಕುಗಳನ್ನು ನೀಡಿದ್ದೆ. ಸದರಿ ಚೆಕ್ಕಿನ ಒಕ್ಕಣೆಗಳನ್ನು ನಾನು ನಾನು ಬರೆದಿಲ್ಲ. ಸದರಿ ಸಾಲದ ಹಣವನ್ನು ಆರು ತಿಂಗಳ ಒಳಗೆ ಮರುಪಾವತಿ ಮಾಡುವುದಾಗಿ ಹೇಳಿದ್ದೆ. ಆರು ತಿಂಗಳಿಗೆ 30 ಸಾವಿರ ರೂ ಬಡ್ಡಿ ಎಂದು ಹೇಳಿದ್ದರು. ಆರು ತಿಂಗಳ ನಂತರ 1 ಲಕ್ಷ 30 ಸಾವಿರ ಹಣ ನೀಡಬೇಕು ಅಂತ ಹೇಳಿದ್ದರು. ಅದಕ್ಕೆ ನಾವು ಒಪ್ಪಿಕೊಂಡಿದ್ದೆವು. ಪಿರ್ಯಾದುದಾರರು ಫೈನಾನ್ಸ್ ಕಲೆಕ್ಷನ್ ಆಗಿ ಪ್ರತಿದಿನ ಕಳುಹಿಸುತ್ತಿದ್ದರು. ದಿನಕ್ಕೆ 600 ರೂ ನಂತೆ ಕಟ್ಟಿಕೊಂಡು ಬಂದು ಅಸಲು 50 ಸಾವಿರ ರೂ ಹಾಗೂ ಬಡ್ಡಿ ಹಣ 30 ಸಾವಿರ ರೂ ಕಟ್ಟಿರುತ್ತೇನೆ.

2. ಒಂದು ಲಕ್ಷ ಸಾಲದ ಹಣದ ಪೈಕಿ 50 ಸಾವಿರ ಅಸಲು ಹಣ ತೀರಿಸದೇ ಇದ್ದ ಕಾರಣ ಅವರು ನನಗೆ ತುಂಬಾ ಹಿಂಸೆ ನೀಡುತ್ತಿದ್ದ ಕಾರಣ ನಾನು ಚನ್ನಪಟ್ಟಣ ಪುರ ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದುದಾರರ ವಿರುದ್ಧ ದೂರು ದಾಖಲು ಮಾಡಿದ್ದೇನೆ. ಆಗ

ಪೊಲೀಸರು ಪಿರ್ಯಾದುದಾರರು ಮತ್ತು ಅವರ ಪತಿಯನ್ನು ಪೊಲೀಸ್ ಠಾಣೆಗೆ ಕರೆಯಿಸಿ ಮಾತು ಕತೆ ಮಾಡಿ 50 ಸಾವಿರ ಹಣ ಮರುಪಾವತಿ ಮಾಡಲು 4-5 ತಿಂಗಳು ಕಾಲವಕಾಶ ಕೊಡಿ ಎಂದು ಬುದ್ದಿವಾದ ಹೇಳಿ ಕಳುಹಿಸಿರುತ್ತಾರೆ. ಸದರಿ ಹಣವನ್ನು ನಾನು ತೀರ್ಮಾನವಾದ 1 ತಿಂಗಳ ನಂತರ ಪಿರ್ಯಾದುದಾರರಿಗೆ ನೀಡಲು ಹೋದಾಗ ಅವರು ತೆಗೆದುಕೊಳ್ಳಲಿಲ್ಲ. ಇದಾದ ಬಳಿಕ ಇನ್ನೂ ಹೆಚ್ಚಿಗೆ ಹಣ ಕೊಡಿ ಎಂದು ಕೇಳಿದರು. ಆಗ ನಾನು ಪೊಲೀಸ್ ಠಾಣೆಯಲ್ಲಿ ಎಷ್ಟು ಹಣಕ್ಕೆ ತೀರ್ಮಾನವಾಗಿದೆಯೋ ಅಷ್ಟು ಹಣ ಕೊಡುವುದಾಗಿ ಹೇಳಿದೆ. ಇದಾದ ಒಂದು ತಿಂಗಳ ನಂತರ ಪಿರ್ಯಾದುದಾರರಿಂದ ನನಗೆ ನೋಟೀಸು ಬಂತು.

(ಪಿರ್ಯಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.)

<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.